# ಎನ್‌ಐಟಿಕೆಯಲ್ಲಿ ರಾಷ್ಟ್ರೀಯ ಏಕತಾ ದಿನ

**ಸಂ.ಕ.ಸಮಾಚಾರ, ಮಂಗಳೂರು**

ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ವತಿಯಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಯಿತು.

ಅ.25ರಿಂದ ಅ.31ರವರೆಗೆ ನಡೆದ ಏಕತಾ ಸಪ್ತಾಹದ ಭಾಗವಾಗಿ, ಎನ್‌ಐಟಿಕೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯ ಸ್ಮರಣಾರ್ಥ



ಏಕತಾ ಓಟ ಮತ್ತು ಏಕತಾ ಪ್ರತಿಜ್ಞೆ ಸೇರಿದಂತೆ ಸರಣಿ ಕಾರ್ಯಕ್ರಮಗಳನ್ನು ನಡೆಸಿತು.

ಯುನಿಟಿ ರನ್‌ನಲ್ಲಿ ನಿರ್ದೇಶಕ ಪ್ರೊ.ಬಿ.ರವಿ, ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ.ಎ.ಸಿ.ಹೆಗ್ಡೆ, ಇತರ ಡೀನ್‌ಗಳು, ಆಡಳಿತ ಮುಖ್ಯಸ್ಥರು, ಎನ್‌ಐಟಿಕೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು. ರಾಷ್ಟ್ರದ ಏಕತೆ, ಸಮಗ್ರತೆ ಮತ್ತು ಭದ್ರತೆಯನ್ನು ಎತ್ತಿಹಿಡಿಯಲು ಮತ್ತು ಅದರ ಉದ್ದೇಶವನ್ನು ಬೆಂಬಲಿಸಲು ಭಾಗವಹಿಸುವವರು ಪ್ರತಿಜ್ಞೆ ಮಾಡಿದರು.

Samyukta Karnataka, Date:01/11/23, p, no -02